## ಅಂಗೈಯಲ್ಲಿ ಅರಮನೆ

### ಸೆಂಡೆತ್ತು

ಈಗೊಂದು ಹದಿನೈದು ವರ್ಷಗಳ ಹಿಂದಿನ ಮಾತು. ನಮಗೆ ಗೊತ್ತಿರುವ ಚಿತ್ರದುರ್ಗದ ಹುಡುಗ, ಶಿಕಾರಿಪುರದ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದ. ಎರಡೂ ಕಡೆಯ ಭಾಷೆ, ಮಾತನಾಡುವ ಶೈಲಿ ಬೇರೆಯೇ. ಹೊಸದಾಗಿ ಮದುವೆಯಾದಾಗ ಹೆಂಡತಿಯ ತವರು ಮನೆಯಲ್ಲಿ ಏನೋ ಓದುತ್ತ ಕುಳಿತಿದ್ದ. ಹೊರಗಿನಿಂದ ಹಿರಿಯಜ್ಜಿಯೊಬ್ಬರು ಹತ್ತಿರ ಬಂದು 'ಸೆಂಡೆತ್ತೋ ತಮ್ಮಾ, ನೋಡೂಣು' ಎನ್ನುತ್ತಿದ್ದಂತೆ, ಗಾಬರಿಯಾದ ಹುಡುಗ ಪಕ್ಕದಲ್ಲಿ ಮಕ್ಕಳು ಆಡಿ ಬಿಟ್ಟುಹೋಗಿದ್ದ ಚೆಂಡನ್ನು ಎತ್ತಿ ಅಜ್ಜಿಯ ಕೈಗೆ ಕೊಟ್ಟಿದ್ದ. ಅವನ ಹೆಂಡತಿ ಜೋರಾಗಿ ನಗುತ್ತಾ 'ಸೆಂಡು' ಎಂದರೆ ಇಲ್ಲಿ 'ತಲೆ' ಎಂದಾಗ ಅರ್ಥವಾಗಿ ಅವನೂ ನಗತೊಡಗಿದ.

**ನಳಿನಿ ಟಿ. ಭೀಮಪ್ಪ**



---



### ರಕ್ತ ಅಲ್ಲ

ಟೀವಿಯಲ್ಲಿ RRR ಸಿನಿಮಾದ ಫೈಟ್ ಸೀನ್ ನೋಡೋಣ ಅಂತ ವಜ್ರಾಂಶು ದುಂಬಾಲು ಬಿದ್ದಿದ್ದ. ನನ್ನ ಪತ್ನಿಗೆ ಅದರಲ್ಲಿ ಬರುವ ಹೊಡೆದಾಟ–ಬಡಿದಾಟ, ರಕ್ತರಂಜನೀಯ ಸೀನುಗಳನ್ನು ನೋಡುವುದು ಕಷ್ಟ. ಅವಳು, 'ಬೇಡ ಕಣೋ, ಆ ಸೀನುಗಳನ್ನು ನೋಡಲು ಆಗುವುದಿಲ್ಲ. ಆ ರಕ್ತಾನೆಲ್ಲಾ ಯಾರಪ್ಪಾ ಕಣ್ಣಿಂದ ನೋಡ್ತಾರೆ' ಎಂದು ಹೇಳುತ್ತಿದ್ದಳು. ಅವನು, 'ಇಲ್ಲ ಆಂಟಿ, ಅದು ನಿಜವಾದ ರಕ್ತ ಅಲ್ಲ. ಕೆಂಪು ಪೈಂಟ್ ಬಳಸ್ತಾರೆ ಅಷ್ಟೆ' ಎಂದು ಸಮಜಾಯಿಷಿ ಕೊಟ್ಟ.

**ತಲಕಾಡು ಶ್ರೀನಿಧಿ**